ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಕೆರೆಯಲ್ಲಿ ಬಿರುಕು ಬಿಟ್ಟಿರುವುದಿಲ್ಲ. ತೂಬಿಗೆ ಸ್ವಲ್ಪ ಹಾನಿಯಾಗಿದೆ. ಕೆರೆಗೆ ಯಾವ ಅಪಾಯವೂ ಇಲ್ಲ.

ಇ) ಮಳೆಗಾಲ ಮುಗಿದನಂತರ ತೂಬಿನ ದುರಸ್ತಿಯನ್ನು ಕೈಗೊಳ್ಳಲಾಗುವುದು.

ಧರ್ಮಪುರ ಫೀಡರ್ ಚಾನಲ್

೯೪೦. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರಿಯೂರು ತಾಲ್ಲೂಕು, ಧರ್ಮಪುರ ಹೋಬಳಿ ಜನರಿಗೆ ನೀರಾವರಿ ಸೌಲಭ್ಯ ನೀಡಲು ಧರ್ಮಪುರ ಫೀಡರ್ ಚಾನಲ್ ಮಾಡಬೇಕೆಂಬ ಬೇಡಿಕೆ ಸರ್ಕಾರದವರ ಮುಂದೆ ಇಟ್ಟಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಸರ್ಕಾರದವರು ಇದರ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಯೋಜನೆ ಕೇಂದ್ರ ಸರ್ಕಾರದ ಆನುಮತಿಯನ್ನು ಪಡೆಯಲು ಯೋಜನೆಯ ನಿರ್ದೇಶನಾರ್ಥ ವಿವರಗಳನ್ನು ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ. ಕೇಂದ್ರ ಜಲ ಆಯೋಗದ ಟೀಕೆಗಳಿಗೆ ಉತ್ತರಗಳನ್ನು ಕಳುಹಿಸಲಾಗುತ್ತಿದೆ.

ಭೂ ರಹಿತರಿಗೆ ಸರಕಾರ ಕೊಟ್ಟ ಭೂಮಿಯಲ್ಲಿ ಅರಣ್ಯ ಇಲಾಖೆಯು ಪರಂ ಮರಗಳನ್ನು ಬೆಳೆಸಂತ್ತಿರುವುದು.

೧೧೩೨. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿರಿಯೂರು ತಾಲ್ಲೂಕಿನಲ್ಲಿರುವ ಒಟ್ಟು ಅರಣ್ಯ ಇಲಾಖೆಯ ಭೂಮಿ ಎಷ್ಟು ? ಇತ್ತೀಚೆಗೆ ಸರಕಾರದವರು ಸಿ ಮತ್ತು ಡಿ ವರ್ಗಗಳಾಗಿ ವಿಂಗಡಣೆ ಮಾಡಿ ಇಲಾಖೆಗೆ ಒಪ್ಪಿಸಿರುವ ಭೂಮಿ ಎಷ್ಟು ?

ಆ) ಸರ್ಕಾರದವರು ಭೂ ರಹಿತರಿಗೆ ದರಖಾಸ್ತು ಮುಖೇನ ಕೊಟ್ಟ ಭೂಮಿಗಳಲ್ಲಿ ಸಹ ಇಲಾಖೆಯವರು ಮರನೆಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಎಷ್ಟು ಪ್ರದೇಶದಲ್ಲಿ ಮರಗಳನ್ನು ನೆಡಲಾಗಿದೆ ?

ಇ) ಈ ರೈತರು ಭೂಮಿಗೆ ಸಂಬಂಧಿಸಿದ ಎಲ್ಲಾ ಹಕ್ಕು ದಾಖಲೆಗಳು ಮತ್ತು ಪಹಣಿಗಳನ್ನು ಹೊಂದಿದ್ದರೂ ಅವರ ಭೂಮಿಗಳಲ್ಲಿ ಮರಗಳನ್ನು ನೆಟ್ಟು ಅವರುಗಳು ತೊಂದರೆಗೀಡಾಗಿರುವುದನ್ನು ಪರಿಹರಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಬಿ. ವಿ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ೨೯೪೮.೨೦ ಎಕರೆಗಳು
೩೭೧೨.೩೯ ಎಕರೆಗಳು.

ಆ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಸರ್ವೆ ನಂ. ೬೪ ಮತ್ತು ೪೪ ಅರಸಿನಗುಂಡಿಹಳ್ಳಿ, ಹಿರಿಯೂರು ತಾಲ್ಲೂಕಿನ ಭೂ ರಹಿತ ರೈತರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿದ ನಂತರ ಇಲಾಖೆ ವತಿಯಿಂದ ಸಸಿಗಳನ್ನು ನೆಟ್ಟಿಲ್ಲ. ಮತ್ತು ಇಂತಹ ಬೇರೆ ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿಲ್ಲ.